# ಶಅ್‌ಬಾನ್ ತಿಂಗಳ ಬಗ್ಗೆ ಒಂದು ಮಾತು

[ Kannada – ಕನ್ನಡ – الكنادي ]

ಶೈಖ್ ಮುಹಮ್ಮದ್ ಇಬ್ನ್ ಸಾಲಿಹ್ ಅಲ್‌ಉಸೈಮೀನ್

ಮುಹಮ್ಮದ್ ಹಂಝ ಪುತ್ತೂರು

ಅಬ್ದುಸ್ಸಲಾಂ ಕಾಟಿಪಳ್ಳ

# كَلِمَةٌ حَوْلَ شَهْرِ شَعْبَانَ

الشيخ محمد بن صالح العثيمين

ترجمة: محمد حمزة البوتوري

مراجعة: عبد السلام كاتيبلا

# ಶಅ್‌ಬಾನ್ ತಿಂಗಳ ಬಗ್ಗೆ ಒಂದು ಮಾತು

**ಶಅ್‌ಬಾನ್ ತಿಂಗಳಿಗೆ ಸಂಬಂಧಿಸಿದ ಪ್ರಾಮುಖ್ಯತೆಯಿರುವ ಕೆಲವು ವಿಷಯ ಗಳು:**

**ಒಂದು: ಶಅ್‌ಬಾನ್ ತಿಂಗಳಲ್ಲಿ ಉಪವಾಸ ಆಚರಿಸುವುದಕ್ಕಿರುವ ಶ್ರೇಷ್ಠತೆ:**

ಸಹೀಹುಲ್ ಬುಖಾರಿ ಮತ್ತು ಸಹೀಹ್ ಮುಸ್ಲಿಂನಲ್ಲಿ ವರದಿಯಾಗಿರುವ ಆಯಿಶಾ (﵅)ರವರ ಒಂದು ಹದೀಸಿನಲ್ಲಿ ಹೀಗಿದೆ:

عَنْ عَائِشَةَ رَضِيَ اللَّهُ عَنْهَا قَالَتْ: مَا رَأَيْتُ النَّبِيَّ صَلَّى اللَّهُ عَلَيْهِ وَسَلَّمَ اسْتَكْمَلَ صِيَامَ

شَهْرٍ قَطُّ إِلَّا رَمَضَانَ، وَمَا رَأَيْتُهُ فِي شَهْرٍ أَكْثَرَ صِيَامًا مِنْهُ فِي شَعْبَانَ.

*ಆಯಿಶಾ(﵄) ಹೇಳುತ್ತಾರೆ: "ಪ್ರವಾದಿ (ﷺ)ರವರು ರಮದಾನ್ ತಿಂಗಳ ಹೊರತು ಬೇರೆ ತಿಂಗಳುಗಳಲ್ಲಿ ಪೂರ್ಣವಾಗಿ ಉಪವಾಸ ಆಚರಿಸಿದ್ದನ್ನು ನಾನು ಕಂಡಿಲ್ಲ. ಪ್ರವಾದಿ(ﷺ)ರವರು ಶಅ್‌ಬಾನ್ ತಿಂಗಳ ಹೊರತು ಬೇರೆ ತಿಂಗಳುಗಳಲ್ಲಿ ಅತ್ಯಧಿಕ ಉಪವಾಸ ಆಚರಿಸುವುದನ್ನು ನಾನು ಕಂಡಿಲ್ಲ."*

ಅಲ್‌ಬುಖಾರಿಯ ಇನ್ನೊಂದು ವರದಿ ಯಲ್ಲಿ ಹೀಗಿದೆ:

كَانَ يَصُومُ شَعْبَانَ كُلَّهُ.

*“ಅವರು ಶಅ್‌ಬಾನ್ ತಿಂಗಳಲ್ಲಿ ಪೂರ್ಣ ವಾಗಿ ಉಪವಾಸ ಆಚರಿಸುತ್ತಿದ್ದರು.”*

ಮುಸ್ಲಿಂರ ಇನ್ನೊಂದು ವರದಿಯಲ್ಲಿ ಹೀಗಿದೆ:

كَانَ يَصُومُ شَعْبَانَ إِلَّا قَلِيلًا.

*“ಅವರು ಶಅ್‌ಬಾನ್ ತಿಂಗಳಲ್ಲಿ ಕೆಲವೇ ದಿನಗಳ ಹೊರತು ಉಳಿದೆಲ್ಲ ದಿನಗಳಲ್ಲಿ ಉಪವಾಸ ಆಚರಿಸುತ್ತಿದ್ದರು.”*

ಇಮಾಂ ಅಹ್ಮದ್ ಮತ್ತು ಅನ್ನಸಾಈ ವರದಿ ಮಾಡಿದ ಉಸಾಮಃ ಇಬ್ನ್ ಝೈದ್(ﷺ)ರವರ ಹದೀಸಿನಲ್ಲಿ ಹೀಗಿದೆ:

عَنْ أُسَامَةَ بْنِ زَيْدٍ رَضِيَ اللَّهُ عَنْهُمَا قَالَ: لَمْ يَكُنْ يَصُومُ مِنَ الشَّهْرِ مَا يَصُومُ مِنْ شَعْبَانَ. فَقَالَ لَهُ: لَمْ أَرَكَ تَصُومُ مِنَ الشَّهْرِ مَا تَصُومُ مِنْ شَعْبَانَ. قَالَ: «ذَاكَ شَهْرٌ يَغْفُلُ النَّاسُ عَنْهُ بَيْنَ رَجَبٍ وَرَمَضَانَ، وَهُوَ شَهْرٌ تُرْفَعُ فِيهِ الْأَعْمَالُ إِلَى رَبِّ الْعَالَمِينَ عَزَّ وَجَلَّ، فَأُحِبُّ أَنْ يُرْفَعَ عَمَلِي وَأَنَا صَائِمٌ».

ಉಸಾಮಃ ಇಬ್ನ್ ಝೈದ್(رضي الله عنه)ರಿಂದ ವರದಿ: ಅವರು ಹೇಳುತ್ತಾರೆ: ಪ್ರವಾದಿ (ﷺ)ರವರು ಶಅ್‌ಬಾನ್ ತಿಂಗಳಲ್ಲಿ ಉಪವಾಸ ಆಚರಿಸುವಂತೆ ಇತರ ಯಾವುದೇ ತಿಂಗಳಲ್ಲೂ ಉಪವಾಸ

ಆಚರಿಸುತ್ತಿರಲಿಲ್ಲ. ನಾನು ಅವರಲ್ಲಿ ಕೇಳಿದೆ: “ತಾವು ಶಅ್‌ಬಾನ್ ತಿಂಗಳಲ್ಲಿ ಉಪವಾಸ ಆಚರಿಸುವಂತೆ ಇತರ ಯಾವುದೇ ತಿಂಗಳಲ್ಲೂ ಉಪವಾಸ ಆಚರಿಸುವುದನ್ನು ನಾನು ಕಂಡಿಲ್ಲವಲ್ಲ.” ಆಗ ಅವರು ಹೇಳಿದರು: “ಅದು ರಜಬ್ ಮತ್ತು ರಮದಾನ್ ತಿಂಗಳುಗಳ ನಡುವೆಯಿರುವ ಜನರ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಒಂದು ತಿಂಗಳು. ಅದು ಎಂತಹ ತಿಂಗಳೆಂದರೆ ಆ ತಿಂಗಳಲ್ಲಿ ಮನುಷ್ಯರ ಕರ್ಮಗಳು ಅಲ್ಲಾಹನ ಕಡೆಗೆ ಎತ್ತಲ್ಪಡುವುದು. ನಾನು ಉಪವಾಸ ಆಚರಿಸಿದವನಾಗಿರುವ ಸ್ಥಿತಿಯಲ್ಲಿ ನನ್ನ ಕರ್ಮವು ಅಲ್ಲಾಹನ ಕಡೆಗೆ ಎತ್ತಲ್ಪಡು ವುದನ್ನು ನಾನು ಇಷ್ಟಪಡುತ್ತೇನೆ.”

[ಅಲ್‌ಫುರೂಅ್‌ನಲ್ಲಿ (3/120) ಇದರ ಸನದನ್ನು ಜಯ್ಯಿದ್ ಎನ್ನಲಾಗಿದೆ]

**ಎರಡು: ಶಅ್‌ಬಾನ್ ಹದಿನೈದನೇ ದಿನ ಉಪವಾಸ ಆಚರಿಸುವುದು:**

ಇಮಾಂ ಇಬ್ನ್ ರಜಬ್(ﷀ) ತಮ್ಮ 'ಲತಾಇಫುಲ್ ಮಆರಿಫ್' ಎಂಬ ಗ್ರಂಥದಲ್ಲಿ (ಪುಟ 143) ಹೇಳುವ ಪ್ರಕಾರ, ಸುನನ್ ಇಬ್ನ್ ಮಾಜದಲ್ಲಿ ದುರ್ಬಲವಾದ ಸನದ್‌ನ ಮೂಲಕ ಅಲೀ(ﷺ)ರಿಂದ ಒಂದು ಹದೀಸ್ ವರದಿಯಾಗಿದೆ. ಆ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

«إِذَا كَانَتْ لَيْلَةُ النِّصْفِ مِنْ شَعْبَانَ، فَقُومُوا لَيْلَهَا وَصُومُوا نَهَارَهَا، فَإِنَّ اللَّهَ يَنْزِلُ فِيهَا لِغُرُوبِ الشَّمْسِ إِلَى سَمَاءِ الدُّنْيَا، فَيَقُولُ: أَلَا مِنْ مُسْتَغْفِرٍ لِي فَأَغْفِرَ لَهُ، أَلَا مُسْتَرْزِقٌ فَأَرْزُقَهُ، أَلَا مُبْتَلًى فَأُعَافِيَهُ، أَلَا كَذَا أَلَا كَذَا، حَتَّى يَطْلُعَ الْفَجْرُ».

“ಶಅ್‌ಬಾನ್ ತಿಂಗಳ ಹದಿನೈದನೇ ರಾತ್ರಿ ಬಂದರೆ ನೀವು ಅದರ ರಾತ್ರಿಯಲ್ಲಿ ನಮಾಝ್ ಮಾಡಿರಿ ಮತ್ತು ಅದರ ಹಗಲಲ್ಲಿ ಉಪವಾಸ ಆಚರಿಸಿರಿ. ಯಾಕೆಂದರೆ ಖಂಡಿತವಾಗಿಯೂ ಅಲ್ಲಾಹು ಸೂರ್ಯಾಸ್ತದ ಸಮಯದಲ್ಲಿ

ಒಂದನೇ ಆಕಾಶಕ್ಕೆ ಇಳಿದು ಬಂದು ಹೇಳುವನು: ನನ್ನಲ್ಲಿ ಕ್ಷಮೆ ಬೇಡುವವರು ಯಾರಿದ್ದೀರಿ? ಹಾಗಾದರೆ ನಾನು ಅವರಿಗೆ ಕ್ಷಮಿಸುವೆನು. ನನ್ನಲ್ಲಿ ಜೀವ ನಾಧಾರ ಬೇಡುವವರು ಯಾರಿದ್ದೀರಿ? ಹಾಗಾದರೆ ನಾನು ಅವರಿಗೆ ಜೀವನಾ ಧಾರ ಒದಗಿಸುವೆನು. ರೋಗದಿಂದ ಬಳಲುವವರು ಯಾರಿದ್ದೀರಿ? ಹಾಗಾದರೆ ನಾನು ಅವರ ರೋಗವನ್ನು ಗುಣಪಡಿಸುವೆನು. ಇಂತಿಂತಹವರು ಇದ್ದಾರಾ? ಇಂತಿಂತಹವರು ಇದ್ದಾರಾ? ಎಂದು ಅವನು ಪ್ರಭಾತೋದಯದ ತನಕ ಕೇಳುತ್ತಲೇ ಇರುವನು."

ನಾನು ಹೇಳುತ್ತೇನೆ: ಅಲ್‌ಮನಾರ್ ಗ್ರಂಥದ ಲೇಖಕರು ಇದನ್ನು ಮೌದೂಅ್

(ಕೃತಕವಾಗಿ ನಿರ್ಮಿಸಿದ ಹದೀಸ್) ಎಂದಿದ್ದಾರೆ. ಸರಿಯಾಗಿ ಹೇಳುವುದಾದರೆ ಇದೊಂದು ಮೌದೂಅ್ ಹದೀಸ್. ಇದರ ಸನದ್ ನಲ್ಲಿ ಅಬೂ ಬಕರ್ ಅಬ್ದುಲ್ಲಾಹ್ ಇಬ್ನ್ ಮುಹಮ್ಮದ್ ಎಂಬ ವ್ಯಕ್ತಿಯಿದ್ದಾರೆ. ಇವರು ಇಬ್ನ್ ಅಬೀ ಬುಸ್ರಾ ಎಂಬ ಹೆಸರಲ್ಲೇ ಪರಿಚಿತರು. ಇವರ ಬಗ್ಗೆ ಇಮಾಂ ಅಹ್ಮದ್ ಮತ್ತು ಯಹ್ಯಾ ಇಬ್ನ್ ಮಈನ್ ಹೇಳುತ್ತಾರೆ: "*ಈ ವ್ಯಕ್ತಿ ಹದೀಸ್‌ಗಳನ್ನು ಕೃತಕವಾಗಿ ನಿರ್ಮಿಸುತ್ತಾರೆ.*"

ಇದರ ಆಧಾರದಲ್ಲಿ ಶಅ್‌ಬಾನ್ ಹದಿನೈದನೇ ದಿನ ಉಪವಾಸ ಆಚರಿಸುವುದು ಸುನ್ನತ್ತಿಲ್ಲ. ಕಾರಣ, ಹದೀಸ್ ವಿದ್ವಾಂಸರ ಪ್ರಕಾರ ಶರಈ ನಿಯಮಗಳನ್ನು ದುರ್ಬಲ

ಅಥವಾ ಕೃತಕ ಹದೀಸ್‌ಗಳ ಆಧಾರದಲ್ಲಿ ನಿರ್ಮಿಸಲಾಗುವುದಿಲ್ಲ.

ಶಅ್‌ಬಾನ್ ಹದಿನೈದರ ಉಪವಾಸ ಸುನ್ನತ್ ಅಲ್ಲವೆಂದಾದರೆ ಅದು ಬಿದ್‌ಅತ್ ಆಗಿದೆ. ಕಾರಣ, ಉಪವಾಸ ಒಂದು ಆರಾಧನೆ. ಶರಈ ನಿಯಮಗಳ ಪ್ರಕಾರ ದೃಢಪಡದಿದ್ದರೆ ಉಪವಾಸ ಆಚರಿಸುವುದು ಬಿದ್‌ಅತ್ ಆಗುತ್ತದೆ. ಬಿದ್‌ಅತ್‌ಗಳ ಬಗ್ಗೆ ಪ್ರವಾದಿ(ﷺ)ರವರು ಹೇಳುತ್ತಾರೆ:

«كُلُّ بِدْعَةٍ ضَلَالَةٌ»

*“ಎಲ್ಲ ಬಿದ್‌ಅತ್‌ಗಳು ಪಥಭ್ರಷ್ಟತೆಯಾಗಿವೆ.”*

## ಮೂರು: ಶಅ್‌ಬಾನ್ ಹದಿನೈದನೇ ರಾತ್ರಿಯ ಶ್ರೇಷ್ಠತೆ:

ಶಅ್‌ಬಾನ್ ಹದಿನೈದರ ರಾತ್ರಿಯ ಶ್ರೇಷ್ಠತೆಗಳನ್ನು ವಿವರಿಸುವ ಅನೇಕ ಹದೀಸ್‌ಗಳು ವರದಿಯಾಗಿವೆ. ಆ ಹದೀಸ್‌ಗಳ ಬಗ್ಗೆ ಹಾಫಿಝ್ ಇಬ್ನ್ ರಜಬ್ ತಮ್ಮ 'ಲತಾಇಫುಲ್ ಮಆರಿಫ್' ಎಂಬ ಗ್ರಂಥದಲ್ಲಿ ಹೇಳುತ್ತಾರೆ:

إِنَّهُ قَدِ اخْتُلِفَ فِيهَا، فَضَعَّفَهَا الْأَكْثَرُونَ، وَصَحَّحَ ابْنُ حِبَّانَ بَعْضَهَا وَخَرَّجَهَا فِي صَحِيحِهِ، وَمِنْ أَمْثِلَتِهَا حَدِيثُ عَائِشَةَ رَضِيَ اللَّهُ عَنْهَا وَفِيهِ: أَنَّ اللَّهَ تَعَالَى يَنْزِلُ لَيْلَةَ

النِّصْفِ مِنْ شَعْبَانَ إِلَى سَمَاءِ الدُّنْيَا فَيَغْفِرُ لِأَكْثَرَ مِنْ عَدَدِ شَعْرِ غَنَمِ كَلْبٍ، خَرَّجَهُ الْإِمَامُ أَحْمَدُ وَالتِّرْمِذِيُّ وَابْنُ مَاجَهْ، وَذَكَرَ التِّرْمِذِيُّ أَنَّ الْبُخَارِيَّ ضَعَّفَهُ.

“ಈ ಹದೀಸ್‌ಗಳ ಬಗ್ಗೆ ವಿದ್ವಾಂಸರಲ್ಲಿ ಭಿನ್ನಮತವಿದೆ. ಹೆಚ್ಚಿನ ವಿದ್ವಾಂಸರು ಈ ಹದೀಸ್‌ಗಳನ್ನು ದುರ್ಬಲವೆಂದಿದ್ದಾರೆ. ಅವುಗಳಲ್ಲಿ ಕೆಲವು ಹದೀಸ್‌ಗಳನ್ನು ಇಬ್ನ್ ಹಿಬ್ಬಾನ್ ತಮ್ಮ ಗ್ರಂಥದಲ್ಲಿ ಉದ್ಧರಿಸಿ ಸಹೀಹ್ ಎಂದಿದ್ದಾರೆ. ಅವುಗಳಲ್ಲೊಂದು ಆಯಿಶಾ(رضي الله عنها) ವರದಿ ಮಾಡಿದ ಹದೀಸ್. ಆ ಹದೀಸಿನಲ್ಲಿ ಶಅ್‌ಬಾನ್ ಹದಿನೈದನೇ ರಾತ್ರಿ ಅಲ್ಲಾಹು ಒಂದನೇ ಆಕಾಶಕ್ಕೆ

*ಇಳಿದು ಕಲ್ಬ್ ಗೋತ್ರದ ಆಡುಗಳ ರೋಮಗಳಿಗಿಂ ತಲೂ ಹೆಚ್ಚು ಜನರಿಗೆ ಕ್ಷಮೆ ನೀಡುವನು ಎಂದಿದೆ. ಇದನ್ನು ಇಮಾಂ ಅಹ್ಮದ್, ಅತ್ತಿರ್ಮಿದೀ ಮತ್ತು ಇಬ್ನ್ ಮಾಜ ವರದಿ ಮಾಡಿದ್ದಾರೆ. ಅಲ್‌ಬುಖಾರಿ ಈ ಹದೀಸನ್ನು ದುರ್ಬಲವೆಂದಿದ್ದಾರೆಂದು ಅತ್ತಿರ್ಮಿದೀ ಹೇಳಿದ್ದಾರೆ."*

ನಂತರ ಇಬ್ನ್ ರಜಬ್(ﷺ)ರವರು ಇತರ ಅನೇಕ ಹದೀಸ್‌ಗಳನ್ನು ಉದ್ಧರಿಸಿ ಅವುಗಳ ದೌರ್ಬಲ್ಯವನ್ನು ತೋರಿಸಿ ಕೊಟ್ಟಿದ್ದಾರೆ. ಮೇಲೆ ಉಲ್ಲೇಖಿಸಿದ ಆಯಿಶಾ(رضي الله عنها)ರವರ ಹದೀಸ್ ದುರ್ಬಲ ವೆಂದು ಇಮಾಂ ಅಶ್ಶೌಕಾನೀ ಹೇಳಿದ್ದಾರೆ.

ಶೈಖ್ ಅಬ್ದುಲ್ ಅಝೀಝ್ ಇಬ್ನ್ ಬಾಝ್(ﷺ)ರವರು ಹೇಳುತ್ತಾರೆ: *“ಶಅ್‌ಬಾನ್ ಹದಿನೈದರ ರಾತ್ರಿಯ ಶ್ರೇಷ್ಠತೆಯನ್ನು ವಿವರಿಸುವ ಅನೇಕ ಹದೀಸ್‌ಗಳು ವರದಿಯಾಗಿವೆ. ಅವೆಲ್ಲವೂ ದುರ್ಬಲ ಹದೀಸ್‌ಗಳಾಗಿರು ವುದರಿಂದ ಅವುಗಳನ್ನು ಅವಲಂಬಿಸ ಬಾರದು. ಈ ಹದೀಸ್‌ಗಳು ಅನೇಕ ಹಾದಿಗಳಿಂದ ವರದಿಯಾಗಿರುವುದರಿಂದ ಕೆಲವು ಆಧುನಿಕ ವಿದ್ವಾಂಸರು ಆ ಹದೀಸ್‌ಗಳನ್ನು ಹಸನ್ ಎಂದು ಕರೆಯಲು ಯತ್ನಿಸಿದರು. ಆದರೆ ಅವರ ಉದ್ದೇಶ ಈಡೇರಲಿಲ್ಲ. ಯಾಕೆಂದರೆ ಈ ಎಲ್ಲ ಹದೀಸ್‌ಗಳೂ ದುರ್ಬಲವಾಗಿವೆ. ಈ ಹದೀಸ್‌ಗಳು ವರದಿಯಾದ ಎಲ್ಲ ದುರ್ಬಲ*

*ಹಾದಿಗಳನ್ನು ಒಟ್ಟುಗೂಡಿಸಿ ದರೂ ಹೆಚ್ಚೆಂದರೆ ಈ ಹದೀಸ್‌ಗಳ ಬಗ್ಗೆ 'ಹಸನ್ ಲಿಗೈರಿಹೀ' (ಬೇರೆ ಹದೀಸ್‌ಗಳ ಬೆಂಬಲದಿಂದಾಗಿ ಹಸನ್) ಎಂದು ಹೇಳಬಹುದಷ್ಟೆ. ಯಾವುದೇ ಕಾರಣಕ್ಕೂ ಅವು ಸಹೀಹ್ ಎಂಬ ಪದವಿಗೆ ಏರುವುದಿಲ್ಲ. ಹದೀಸ್ ಪಾರಿಭಾಷಿಕ ಶಾಸ್ತ್ರವನ್ನು ಅಧ್ಯಯನ ಮಾಡಿದವರಿಗೆ ಇದು ಚೆನ್ನಾಗಿ ಗೊತ್ತಿದೆ."*

**ನಾಲ್ಕು: ಶಅ್‌ಬಾನ್ ಹದಿನೈದರ ರಾತ್ರಿ ನಮಾಝ್ ಮಾಡುವುದು:**

ಇದಕ್ಕೆ ಮೂರು ಸ್ಥಿತಿಗಳಿವೆ:

1. ಇತರ ರಾತ್ರಿಗಳಲ್ಲಿ ನಮಾಝ್ ಮಾಡುವಷ್ಟೇ ಈ ರಾತ್ರಿಯಲ್ಲೂ

ನಮಾಝ್ ಮಾಡುವುದು. ಉದಾಹರಣೆಗೆ ಒಬ್ಬ ವ್ಯಕ್ತಿ ಎಲ್ಲ ರಾತ್ರಿಗಳಲ್ಲೂ ಕಿಯಾಮುಲ್ಲೈಲ್ ನಿರ್ವಹಿಸುವುದಾದರೆ ಈ ರಾತ್ರಿಯಲ್ಲೂ ಕಿಯಾಮುಲ್ಲೈಲ್ ನಿರ್ವಹಿಸುವುದರಲ್ಲಿ ತೊಂದರೆಯಿಲ್ಲ. ಆದರೆ ಆ ರಾತ್ರಿಗೆ ಪ್ರತ್ಯೇಕ ವಿಶೇಷತೆ ಇದೆಯೆಂಬ ನಂಬಿಕೆ ಸಲ್ಲದು. ಇಂತಹ ನಂಬಿಕೆಯಿಲ್ಲದೆ ಎಲ್ಲ ರಾತ್ರಿಗಳಂತೆಯೇ ಈ ರಾತ್ರಿಯಲ್ಲೂ ನಮಾಝ್ ನಿರ್ವಹಿಸುವುದಾದರೆ ಅದರಲ್ಲಿ ತೊಂದರೆಯಿಲ್ಲ. ಕಾರಣ ಇಂತಹ ವ್ಯಕ್ತಿ ಅಲ್ಲಾಹನ ಧರ್ಮದಲ್ಲಿ ಹೊಸದಾಗಿ ಏನನ್ನೂ ನಿರ್ಮಿಸುವುದಿಲ್ಲ.

2. ಇತರ ರಾತ್ರಿಗಳಲ್ಲಿ ನಮಾಝ್ ಮಾಡದವನು ಈ ರಾತ್ರಿಯಲ್ಲಿ

ವಿಶೇಷವಾಗಿ ನಮಾಝ್ ಮಾಡುವುದು. ಇದು ಬಿದ್‌ಅತ್. ಕಾರಣ, ಈ ರಾತ್ರಿಯಲ್ಲಿ ನಮಾಝ್ ಮಾಡಬೇಕೆಂಬ ಯಾವುದೇ ಆಜ್ಞೆ ಪ್ರವಾದಿ(ﷺ)ರಿಂದ ಸಹೀಹಾಗಿ ವರದಿಯಾಗಿಲ್ಲ. ಪ್ರವಾದಿ (ﷺ)ರಾಗಲಿ, ಸಹಾಬತ್ತಾಗಲಿ ಈ ರಾತ್ರಿಯಲ್ಲಿ ಪ್ರತ್ಯೇಕವಾಗಿ ನಮಾಝ್ ನಿರ್ವಹಿಸಿಲ್ಲ. *"ಶಅ್‌ಬಾನ್ ತಿಂಗಳ ಹದಿನೈದನೇ ರಾತ್ರಿ ಬಂದರೆ ನೀವು ಅದರ ರಾತ್ರಿಯಲ್ಲಿ ನಮಾಝ್ ಮಾಡಿರಿ ಮತ್ತು ಅದರ ಹಗಲಲ್ಲಿ ಉಪವಾಸ ಆಚರಿಸಿರಿ"* ಎಂಬ ಹದೀಸಿನ ಬಗ್ಗೆ ಹೇಳುವುದಾದರೆ, ಆ ಹದೀಸ್ ದುರ್ಬಲ ವೆಂದು ಈಗಾಗಲೇ ಸ್ಪಷ್ಟಪಡಿಸಲಾಗಿದೆ. ಈ ಹದೀಸ್ ಕೃತಕವಾಗಿ ನಿರ್ಮಿಸಲಾದ ಹದೀಸ್

ಎಂದು ಅನೇಕ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಆದರೆ ಕರ್ಮ ಶ್ರೇಷ್ಠತೆಯ ವಿಷಯದಲ್ಲಿ ವರದಿ ಯಾಗುವ ಹದೀಸ್‌ಗಳು ದುರ್ಬಲ ವಾಗಿದ್ದರೂ ಅವುಗಳ ಆಧಾರದಲ್ಲಿ ಅಮಲ್ ಮಾಡಬಹುದು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದನ್ನು ಕೆಲವರು ಈ ಬಿದ್‌ಅತ್ ಆದ ನಮಾಝನ್ನು ನ್ಯಾಯೀಕರಿಸಲು ಬಳಸುತ್ತಾರೆ. ಆದರೆ ಕರ್ಮಶ್ರೇಷ್ಠತೆಯ ವಿಷಯದಲ್ಲಿ ವರದಿಯಾಗುವ ದುರ್ಬಲ ಹದೀಸ್‌ಗಳನ್ನು ಸ್ವೀಕರಿಸಲು ಕೆಲವು ಷರತ್ತುಗಳಿವೆ:

**ಒಂದು:** ದೌರ್ಬಲ್ಯವು ತೀಕ್ಷ್ಣ ಮಟ್ಟದಲ್ಲಿರಬಾರದು. ಆದರೆ ಶಅ್‌ಬಾನ್

ಹದಿನೈದನೇ ರಾತ್ರಿ ನಮಾಝ್ ಮಾಡಬೇಕೆಂದು ಹೇಳುವ ಈ ಹದೀಸ್ ಅತ್ಯಂತ ದುರ್ಬಲವಾಗಿದೆ. ಮಾತ್ರವಲ್ಲ, ಕೆಲವರು ಈ ಹದೀಸನ್ನು ಕೃತಕ (ಮೌದೂಅ್) ಎಂದು ಸಹ ಹೇಳಿದ್ದಾರೆ.

**ಎರಡು:** ಆ ದುರ್ಬಲ ಹದೀಸ್ ಯಾವ ಕರ್ಮದ ಶ್ರೇಷ್ಠತೆಯನ್ನು ವಿವರಿಸುತ್ತದೋ ಆ ಕರ್ಮದ ಮೂಲವು ಸಹೀಹಾದ ಹದೀಸಿನ ಮೂಲಕ ದೃಢಪಟ್ಟಿರಬೇಕು. ಅಂದರೆ ಕುರ್‌ಆನ್ ಅಥವಾ ಸಹೀಹಾದ ಹದೀಸಿನ ಮೂಲಕ ದೃಢಪಟ್ಟ ಒಂದು ಕರ್ಮದ ಶ್ರೇಷ್ಠತೆಯ ಬಗ್ಗೆ ವರದಿಯಾಗುವ ದುರ್ಬಲ ಹದೀಸ್‌ಗಳ ಪ್ರಕಾರ ಮಾತ್ರ ಕರ್ಮವೆಸಗಬಹುದೆಂದು ಉಲಮಾಗಳು ಹೇಳುತ್ತಾರೆ.

ದೌರ್ಬಲ್ಯವು ತೀಕ್ಷ್ಣವಾಗಿರಬಾರದು ಮತ್ತು ಅಸ್ಲ್ (ಮೂಲ) ದೃಢಪಟ್ಟಿರ ಬೇಕು. ಹೀಗೆ ಮೂಲವು ದೃಢಪಟ್ಟಿರುವ ಒಂದು ಕರ್ಮದ ಶ್ರೇಷ್ಠತೆಯನ್ನು ವಿವರಿಸುವ ಒಂದು ಹದೀಸ್ ದುರ್ಬಲ ವಾಗಿದ್ದರೆ ಆ ಹದೀಸಿನ ಪ್ರಕಾರ ಅಮಲ್ ಮಾಡಬಹುದು. ಆದರೆ ದೌರ್ಬಲ್ಯವು ತೀಕ್ಷ್ಣ ಮಟ್ಟದಲ್ಲಿರ ಬಾರದು. ಇದರಲ್ಲಿ ಒಂದೋ ಆ ಪುಣ್ಯ ಆತನಿಗೆ ಸಿಗಬಹುದು. ಇನ್ನು ಸಿಗದಿದ್ದರೂ ಆ ಕರ್ಮವು ಶರೀಅತ್ತಿನಲ್ಲಿ ದೃಢಪಟ್ಟಿರುವುದರಿಂದ ಅವನಿಗೆ ಅದರಲ್ಲಿ ದೋಷವಿರಲಾರದು.

ಆದರೆ ನಮಗೆ ಚೆನ್ನಾಗಿ ಗೊತ್ತಿರುವ ಪ್ರಕಾರ ಶಅ್‌ಬಾನ್ ಹದಿನೈದರ ರಾತ್ರಿ

ನಮಾಝ್ ಮಾಡುವ ವಿಷಯ ಈ ಎರಡು ಷರತ್ತುಗಳಿಗೂ ಒಪ್ಪಿಗೆಯಾಗುವುದಿಲ್ಲ. ಮೊದಲನೆಯದಾಗಿ, ಶಅ್‌ಬಾನ್ ಹದಿನೈದರ ರಾತ್ರಿ ನಮಾಝ್ ಮಾಡಬೇಕೆಂದು ಹೇಳುವ ಹದೀಸ್ ಅತ್ಯಂತ ದುರ್ಬಲವಾದುದು. ಇನ್ನು ಎರಡನೆಯ ಷರತ್ತಿನ ಪ್ರಕಾರ ನೋಡಿದರೆ ಶಅ್‌ಬಾನ್ ಹದಿನೈದರ ರಾತ್ರಿ ಎಂಬ ಮೂಲ ವಿಷಯವೇ ಶರೀಅತ್ತಿನಲ್ಲಿ ದೃಢಪಟ್ಟಿಲ್ಲ. ಇಬ್ನ್ ರಜಬ್(ﷺ) ತಮ್ಮ 'ಲತಾಇಫುಲ್ ಮಆರಿಫ್'ನಲ್ಲಿ (ಪುಟ 145) ಹೇಳುತ್ತಾರೆ:

فَكَذَلِكَ قِيَامُ لَيْلَةِ النِّصْفِ مِنْ شَعْبَانَ لَمْ يَثْبُتْ فِيهَا عَنِ النَّبِيِّ صَلَّى اللَّهُ عَلَيْهِ وَسَلَّمَ وَلَا عَنْ أَصْحَابِهِ شَيْءٌ.

*“ಅದೇ ರೀತಿ ಶಅ್‌ಬಾನ್ ಹದಿನೈದರ ರಾತ್ರಿ ನಮಾಝ್ ನಿರ್ವಹಿಸುವ ವಿಷಯದಲ್ಲಿ ಪ್ರವಾದಿ(ﷺ)ಯಿಂದಾಗಲಿ, ಅವರ ಸಹಾಬಾಗಳಿಂದಾಗಲಿ ಏನೊಂದೂ ದೃಢಪಟ್ಟಿಲ್ಲ.”*

ಶೈಖ್ ಇಬ್ನ್ ಬಾಝ್(ರ) ಹೇಳುತ್ತಾರೆ: *“ಈ ರಾತ್ರಿಯಲ್ಲಿ ನಮಾಝ್ ಮಾಡಬೇಕೆಂದು ವರದಿಯಾದ ಹದೀಸ್‌ಗಳೆಲ್ಲವೂ ಮೌದೂಅ್ (ಕೃತಕ).”*

ತಾಬಿಊಗಳಲ್ಲಿ ಕೆಲವರು ಈ ನಮಾಝ್ ನಿರ್ವಹಿಸುತ್ತಿದ್ದರೆಂಬ ಬಗ್ಗೆ ವರದಿಯಾಗಿದೆ. ಇದರ ಬಗ್ಗೆ ಹಾಫಿಝ್ ಇಬ್ನ್ ರಜಬ್(ﺭﺣﻤﻪ ﺍﻟﻠﻪ) ತಮ್ಮ 'ಲತಾಇಫುಲ್ ಮಆರಿಫ್'ನಲ್ಲಿ (ಪುಟ 144) ಹೇಳುತ್ತಾರೆ:

وَلَيْلَةُ النِّصْفِ مِنْ شَعْبَانَ كَانَ التَّابِعُونَ مِنْ أَهْلِ الشَّامِ يُعَظِّمُونَهَا وَيَجْتَهِدُونَ فِيهَا فِي الْعِبَادَةِ، وَعَنْهُمْ أَخَذَ النَّاسُ فَضْلَهَا وَتَعْظِيمَهَا، وَقَدْ قِيلَ: إِنَّهُمْ بَلَغَهُمْ فِي ذَلِكَ آثَارٌ إِسْرَائِيلِيَّةٌ، فَلَمَّا اشْتُهِرَ ذَلِكَ عَنْهُمْ فِي الْبُلْدَانِ اخْتَلَفَ النَّاسُ فِي ذَلِكَ. فَمِنْهُمْ مَنْ قَبِلَهُ

وَوَافَقَهُمْ عَلَى تَعْظِيمِهَا، وَأَنْكَرَ ذَلِكَ أَكْثَرُ عُلَمَاءِ الْحِجَازِ، وَقَالُوا: ذَلِكَ كُلُّهُ بِدْعَةٌ.

“ಶಾಮ್‌ನಲ್ಲಿ ವಾಸಿಸುತ್ತಿದ್ದ ಕೆಲವು ತಾಬಿಊಗಳು ಶಅ್‌ಬಾನ್ ಹದಿನೈದರ ರಾತ್ರಿಗೆ ಮಹತ್ವ ಕೊಡುತ್ತಿದ್ದರು ಮತ್ತು ಆ ರಾತ್ರಿಯಲ್ಲಿ ಅವರು ಇಬಾದತ್‌ನಲ್ಲಿ ತಲ್ಲೀನರಾಗುತ್ತಿದ್ದರು. ಜನರು ಇವರನ್ನು ನೋಡಿ ಈ ರಾತ್ರಿಗೆ ಶ್ರೇಷ್ಠತೆ ಮತ್ತು ಮಹತ್ವ ಇದೆಯೆಂದು ತಿಳಿದುಕೊಂಡರು. ಇವರು ಈ ರಾತ್ರಿಗೆ ಶ್ರೇಷ್ಠತೆ ಮತ್ತು ಮಹತ್ವ ನೀಡಲು ಕಾರಣ ಇಸ್ರಾಈಲೀ ವರದಿಗಳು ಎಂದು ಹೇಳಲಾಗುತ್ತದೆ. ಇವರಿಂದ ಈ ವಿಷಯವು ವಿಭಿನ್ನ ಪಟ್ಟಣಗಳಲ್ಲಿ ಪ್ರಚಾರ ಪಡೆದಾಗ ಜನರು

*ಈ ವಿಷಯದಲ್ಲಿ ಅನೇಕ ಅಭಿಪ್ರಾಯಗಳನ್ನು ಹೇಳತೊಡಗಿದರು. ಅವರಲ್ಲಿ ಕೆಲವರು ಈ ರಾತ್ರಿಗೆ ಶ್ರೇಷ್ಠತೆ ಮತ್ತು ಮಹತ್ವವಿದೆಯೆಂದು ಹೇಳಿ ಆ ರಾತ್ರಿಗೆ ಮಹತ್ವ ಕೊಡತೊಡಗಿದರು. ಆದರೆ ಹಿಜಾಝ್ ಪ್ರಾಂತ್ಯದ ಉಲಮಾಗಳು ಇದನ್ನು ವಿರೋಧಿಸುತ್ತಾ "ಇವೆಲ್ಲವೂ ಬಿದ್‌ಅತ್" ಎಂದು ಹೇಳತೊಡಗಿದರು."*

ಹಿಜಾಝ್ ಪ್ರಾಂತ್ಯದ ಉಲಮಾಗಳ ಅಭಿಪ್ರಾಯವೇ ಸರಿ ಎಂಬ ವಿಷಯದಲ್ಲಿ ಯಾವುದೇ ಸಂಶಯವಿಲ್ಲ. ಕಾರಣ, ಅಲ್ಲಾಹು ತಆಲಾ ಹೇಳುತ್ತಾನೆ:

﴿ٱلۡيَوۡمَ أَكۡمَلۡتُ لَكُمۡ دِينَكُمۡ وَأَتۡمَمۡتُ عَلَيۡكُمۡ نِعۡمَتِي وَرَضِيتُ لَكُمُ ٱلۡإِسۡلَٰمَ دِينٗاۚ فَمَنِ ٱضۡطُرَّ فِي مَخۡمَصَةٍ غَيۡرَ مُتَجَانِفٖ لِّإِثۡمٖ فَإِنَّ ٱللَّهَ غَفُورٞ رَّحِيمٞ ٣﴾ [المائدة: 3] .

“ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತಿ ಮಾಡಿಕೊಟ್ಟಿರು ವೆನು. ನನ್ನ ಅನುಗ್ರಹವನ್ನು ನಾನು ನಿಮಗೆ ನೆರವೇರಿಸಿಕೊಟ್ಟಿರುವೆನು. ಇಸ್ಲಾಮನ್ನು ಧರ್ಮವಾಗಿ ನಾನು ನಿಮಗೆ ತೃಪ್ತಿಪಟ್ಟಿರುವೆನು. ಯಾರಾದರೂ ಹಸಿವಿನ ನಿಮಿತ್ತ (ನಿಷಿದ್ಧವಾಗಿರುವು ದನ್ನು ತಿನ್ನಲು) ನಿರ್ಬಂಧಿತನಾದರೆ ಮತ್ತು ಅವನು ಅವಿಧೇಯತೆಯೆಡೆಗೆ

*ವಾಲುವವನಲ್ಲದಿದ್ದರೆ ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."* [ಕುರ್‌ಆನ್ 5:3]

ಒಂದು ವೇಳೆ ಈ ನಮಾಝ್ ಅಲ್ಲಾಹನ ಧರ್ಮದಲ್ಲಿ ಒಳಪಟ್ಟದ್ದಾಗಿರುತ್ತಿದ್ದರೆ ಅಲ್ಲಾಹು ಅದನ್ನು ಅವನ ಗ್ರಂಥದಲ್ಲಿ ವಿವರಿಸಿಕೊಡುತ್ತಿದ್ದನು. ಅಥವಾ ಪ್ರವಾದಿ (ﷺ)ರವರು ಮಾತು ಅಥವಾ ಕೃತಿಯ ಮೂಲಕ ಅದನ್ನು ವಿವರಿಸಿಕೊಡುತ್ತಿದ್ದರು. ಇದೊಂದೂ ಸಂಭವಿಸಿಲ್ಲದ ಕಾರಣ ಇದು ಅಲ್ಲಾಹನ ಧರ್ಮದಲ್ಲಿ ಸೇರಿದ್ದಲ್ಲವೆಂದು ಸ್ಪಷ್ಟವಾಗುತ್ತದೆ. ಅದು ಅಲ್ಲಾಹನ ಧರ್ಮದಲ್ಲಿ ಸೇರಿದ್ದಲ್ಲ ಎಂದಾದರೆ ಅದೊಂದು ಬಿದ್‌ಅತ್

ಎನ್ನುವುದರಲ್ಲಿ ಸಂಶಯವಿಲ್ಲ. ಬಿದ್‌ಅತ್‌ಗಳ ಬಗ್ಗೆ ಪ್ರವಾದಿ(ﷺ)ರವರು ಹೇಳುತ್ತಾರೆ:

«كُلُّ بِدْعَةٍ ضَلَالَةٌ»

*“ಎಲ್ಲ ಬಿದ್‌ಅತ್‌ಗಳು ಪಥಭ್ರಷ್ಟತೆಯಾಗಿವೆ.”*

3. ಈ ರಾತ್ರಿಯಲ್ಲಿ ನಿರ್ದಿಷ್ಟ ರಕ್‌ಅತ್ ನಮಾಝ್ ಮಾಡುವುದು ಮತ್ತು ಪ್ರತಿವರ್ಷ ಅಷ್ಟೇ ರಕ್‌ಅತ್ ನಮಾಝ್ ನಿರ್ವಹಿಸುತ್ತಿರುವುದು. ಉದಾಹರಣೆಗೆ ಈ ರಾತ್ರಿಯಲ್ಲಿ ಹತ್ತು ರಕ್‌ಅತ್ ನಮಾಝ್ ನಿರ್ವಹಿಸುವುದು ಮತ್ತು ಪ್ರತಿವರ್ಷ ಈ ರಾತ್ರಿಯಲ್ಲಿ ಹತ್ತು ರಕ್‌ಅತ್ ನಮಾಝ್

ನಿರ್ವಹಿಸುವು ದನ್ನು ಮುಂದುವರಿಸುವುದು. ಇದು ಎರಡನೇ ಸ್ಥಿತಿಯಲ್ಲಿ ಹೇಳಿದ ಬಿದ್‌ಅತ್ ಗಿಂತಲೂ ತೀಕ್ಷ್ಣವಾದ ಬಿದ್‌ಅತ್. ಕಾರಣ, ಈ ವಿಷಯದಲ್ಲಿ ವರದಿಯಾದ ಹದೀಸ್‌ಗಳೆಲ್ಲವೂ ದುರ್ಬಲ ಅಥವಾ ಕೃತಕ.

**ಐದು: ಶಅ್‌ಬಾನ್ ಹದಿನೈದರ ರಾತ್ರಿ ಯಲ್ಲಿ ಆ ವರ್ಷ ಸಂಭವಿಸುವುದೆಲ್ಲ ವನ್ನೂ ನಿರ್ಣಯಿಸಲಾಗುವುದು:**

ಶಅ್‌ಬಾನ್ ಹದಿನೈದರ ರಾತ್ರಿಯಲ್ಲಿ ಆ ವರ್ಷ ಸಂಭವಿಸುವುದೆಲ್ಲವನ್ನೂ ನಿರ್ಣಯಿಸಲಾಗುವುದು ಎಂಬುದು ಸುಳ್ಳು. ಕಾರಣ, ಈ ವಿಶೇಷತೆಯಿರು ವುದು

ಲೈಲತುಲ್ ಕದ್ರ್‌ಗೆ ಮಾತ್ರ. ಅಲ್ಲಾಹು ತಆಲಾ ಹೇಳುತ್ತಾನೆ:

﴿حمٓ ١ وَٱلۡكِتَٰبِ ٱلۡمُبِينِ ٢ إِنَّآ أَنزَلۡنَٰهُ فِي
لَيۡلَةٖ مُّبَٰرَكَةٍۚ إِنَّا كُنَّا مُنذِرِينَ ٣ فِيهَا يُفۡرَقُ
كُلُّ أَمۡرٍ حَكِيمٍ ٤ أَمۡرٗا مِّنۡ عِندِنَآۚ إِنَّا كُنَّا
مُرۡسِلِينَ ٥ رَحۡمَةٗ مِّن رَّبِّكَۚ إِنَّهُۥ هُوَ ٱلسَّمِيعُ
ٱلۡعَلِيمُ ٦﴾ [الدخان: 1-6].

*“ಹಾ-ಮೀಮ್. ಸುಸ್ಪಷ್ಟ ಗ್ರಂಥದ ಮೇಲಾಣೆ! ಖಂಡಿತವಾಗಿಯೂ ನಾವು ಇದನ್ನು (ಕುರ್‌ಆನನ್ನು) ಒಂದು ಅನುಗ್ರಹೀತ ರಾತ್ರಿಯಲ್ಲಿ ಅವತೀರ್ಣಗೊಳಿಸಿದೆವು. ಖಂಡಿತವಾಗಿಯೂ ನಾವು ಮುನ್ನೆಚ್ಚರಿಕೆ ನೀಡುವವರು. ಆ*

*ರಾತ್ರಿಯಲ್ಲಿ ಯುಕ್ತಿಪೂರ್ಣವಾದ ಎಲ್ಲ ವಿಷಯವನ್ನೂ ಬೇರ್ಪಡಿಸಿ ವಿವರಿಸ ಲಾಗುವುದು. ನಮ್ಮ ವತಿಯಿಂದಿರುವ ಆಜ್ಞೆ! ಖಂಡಿತವಾಗಿಯೂ ನಾವು (ಸಂದೇಶವಾಹಕರನ್ನು) ಕಳುಹಿಸುತ್ತಿರು ವೆವು. ಅದು ತಮ್ಮ ರಬ್ಬಿನ ವತಿಯ ಒಂದು ಕರುಣೆಯಾಗಿದೆ. ಖಂಡಿತವಾಗಿ ಯೂ ಅವನು ಎಲ್ಲವನ್ನು ಆಲಿಸು ವವನೂ ಅರಿಯುವವನೂ ಆಗಿರುವನು."* [ಕುರ್‌ಆನ್ 44:1–6]

ಕುರ್‌ಆನ್ ಅವತೀರ್ಣಗೊಂಡ ಈ ರಾತ್ರಿ ಲೈಲತುಲ್ ಕದ್ರ್‌ನ ರಾತ್ರಿ. ಅಲ್ಲಾಹು ಹೇಳುತ್ತಾನೆ:

﴿إِنَّآ أَنزَلۡنَٰهُ فِي لَيۡلَةِ ٱلۡقَدۡرِ ١﴾ [القدر:1].

*“ಖಂಡಿತವಾಗಿಯೂ ನಾವು ಇದನ್ನು (ಕುರ್‌ಆನನ್ನು) ಲೈಲತುಲ್ ಕದ್ರ್‌ನಲ್ಲಿ ಅವತೀರ್ಣಗೊಳಿಸಿದೆವು.”* [ಕುರ್‌ಆನ್ 97:1]

ಇದು ರಮದಾನ್ ತಿಂಗಳಲ್ಲಿ ಬರುವ ಲೈಲತುಲ್ ಕದ್ರ್. ಕಾರಣ ಅಲ್ಲಾಹು ಕುರ್‌ಆನನ್ನು ಅವತೀರ್ಣಗೊಳಿಸಿದ್ದು ರಮದಾನ್ ತಿಂಗಳಲ್ಲಿ. ಅಲ್ಲಾಹು ಹೇಳುತ್ತಾನೆ:

﴿شَهۡرُ رَمَضَانَ ٱلَّذِيٓ أُنزِلَ فِيهِ ٱلۡقُرۡءَانُ هُدٗى لِّلنَّاسِ وَبَيِّنَٰتٖ مِّنَ ٱلۡهُدَىٰ وَٱلۡفُرۡقَانِۚ فَمَن شَهِدَ مِنكُمُ ٱلشَّهۡرَ فَلۡيَصُمۡهُۖ وَمَن كَانَ مَرِيضًا أَوۡ عَلَىٰ سَفَرٖ فَعِدَّةٞ مِّنۡ أَيَّامٍ أُخَرَۗ يُرِيدُ

ٱللَّهُ بِكُمُ ٱلۡيُسۡرَ وَلَا يُرِيدُ بِكُمُ ٱلۡعُسۡرَ وَلِتُكۡمِلُواْ ٱلۡعِدَّةَ وَلِتُكَبِّرُواْ ٱللَّهَ عَلَىٰ مَا هَدَىٰكُمۡ وَلَعَلَّكُمۡ تَشۡكُرُونَ ﴿١٨٥﴾ [البقرة: 185].

“ಜನರಿಗೆ ಮಾರ್ಗದರ್ಶಿಯಾಗಿ ಮತ್ತು ಸನ್ಮಾರ್ಗವನ್ನು ತೋರಿಸಿಕೊಡುವ ಹಾಗೂ ಸತ್ಯಾಸತ್ಯತೆಗಳನ್ನು ಬೇರ್ಪಡಿಸುವ ಸುಸ್ಪಷ್ಟ ಆಧಾರಪ್ರಮಾಣ ವಾಗಿ ಕುರ್‌ಆನ್ ಅವತೀರ್ಣಗೊಂಡ ತಿಂಗಳು ರಮದಾನ್ ತಿಂಗಳು. ಆದುದರಿಂದ ನಿಮ್ಮ ಪೈಕಿ ಆ ತಿಂಗಳಲ್ಲಿ ಉಪಸ್ಥಿತರಿರುವವರು ಅದರಲ್ಲಿ ಉಪವಾಸವನ್ನು ಆಚರಿಸಲಿ. ಯಾರಾದರೂ ರೋಗಿಯಾಗಿದ್ದರೆ ಅಥವಾ

*ಪ್ರಯಾಣದಲ್ಲಿದ್ದರೆ, ಅವರು ಬೇರೆ ದಿನಗಳಲ್ಲಿ ಆ ಸಂಖ್ಯೆಯಷ್ಟು (ಉಪವಾಸವನ್ನು ಆಚರಿಸಬೇಕು). ಅಲ್ಲಾಹು ನಿಮಗೆ ನಿರಾಳತೆಯನ್ನು ಬಯಸುತ್ತಿರುವನು. ನಿಮಗೆ ಪ್ರಯಾಸ ವನ್ನುಂಟು ಮಾಡಲು ಅವನು ಬಯಸುವುದಿಲ್ಲ. ನೀವು ಆ ಸಂಖ್ಯೆಯನ್ನು ಪೂರ್ತಿಗೊಳಿಸುವ ಸಲುವಾಗಿ, ಅಲ್ಲಾಹು ನಿಮಗೆ ಸನ್ಮಾರ್ಗವನ್ನು ತೋರಿಸಿಕೊಟ್ಟ ಕಾರಣ ನೀವು ಅವನ ಮಹತ್ವವನ್ನು ಕೊಂಡಾ ಡುವ ಸಲುವಾಗಿ ಮತ್ತು ನೀವು ಅವನಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ (ಈ ರೀತಿ ಆಜ್ಞಾಪಿಸಲಾಗಿದೆ).”*
[ಕುರ್‌ಆನ್ 2:185]

ಶಅ್‌ಬಾನ್ ಹದಿನೈದರ ರಾತ್ರಿಯಲ್ಲಿ ಆ ವರ್ಷ ಸಂಭವಿಸುವುದೆಲ್ಲವನ್ನೂ ನಿರ್ಣಯಿಸಲಾಗುವುದು ಎಂದು ಯಾರಾದರೂ ಹೇಳಿದರೆ ಅವರು ಕುರ್‌ಆನ್‌ಗೆ ವಿರುದ್ಧವಾಗಿ ಸಾಗಿದ್ದಾನೆ. ಅಲ್ಲಾಹು ಈ ಆಯತ್‌ಗಳಲ್ಲಿ ಹೇಳಿರು ವುದಕ್ಕೆ ವಿರುದ್ಧವಾಗಿ ಚಲಿಸಿದ್ದಾನೆ.

**ಆರು: ಶಅ್‌ಬಾನ್ ಹದಿನೈದರಂದು ಕೆಲವು ವಿಶೇಷ ಖಾದ್ಯಗಳನ್ನು ತಯಾರಿಸು ವುದು:**

ಕೆಲವರು ಶಅ್‌ಬಾನ್ ಹದಿನೈದರಂದು ಕೆಲವು ವಿಶೇಷ ಖಾದ್ಯಗಳನ್ನು ತಯಾರಿಸಿ ಅದನ್ನು ಬಡಬಗ್ಗರಿಗೆ ಹಂಚುತ್ತಾರೆ. ಈ ಸಂಪ್ರದಾಯಕ್ಕೆ ಇಸ್ಲಾಂನಲ್ಲಿ ಯಾವುದೇ ಆಧಾರವಿಲ್ಲ. ಈ ವಿಷಯದಲ್ಲಿ

ಪ್ರವಾದಿ(ﷺ)ರಿಂದ ಏನೊಂದೂ ವರದಿಯಾಗಿಲ್ಲ. ಆದುದರಿಂದ ಈ ದಿನದಲ್ಲಿ ವಿಶೇಷವಾಗಿ ಖಾದ್ಯ ತಯಾರಿಸಿ ದಾನ ಮಾಡುವುದು ಬಿದ್‌ಅತ್ ಆಗುತ್ತದೆ. ಬಿದ್‌ಅತ್‌ಗಳ ಬಗ್ಗೆ ಪ್ರವಾದಿ(ﷺ)ರವರು ಹೇಳುತ್ತಾರೆ:

«كُلُّ بِدْعَةٍ ضَلَالَةٌ»

*“ಎಲ್ಲ ಬಿದ್‌ಅತ್‌ಗಳು ಪಥಭ್ರಷ್ಟತೆಯಾಗಿವೆ.”*

**ಬಿದ್‌ಅತ್‌ಗಳನ್ನು ಮಾಡುವವನು ಈ ಕೆಳಗಿನ ಎಚ್ಚರಿಕೆಗಳಲ್ಲಿ ಒಳಪಡುವನು:**

1. ಅವನು ಮಾಡುವ ಬಿದ್‌ಅತ್ ಅಲ್ಲಾಹನ ಈ ವಚನವನ್ನು ಸುಳ್ಳು ಮಾಡುತ್ತದೆ:

﴿ٱلۡيَوۡمَ أَكۡمَلۡتُ لَكُمۡ دِينَكُمۡ وَأَتۡمَمۡتُ عَلَيۡكُمۡ نِعۡمَتِي وَرَضِيتُ لَكُمُ ٱلۡإِسۡلَٰمَ دِينٗاۚ فَمَنِ ٱضۡطُرَّ فِي مَخۡمَصَةٍ غَيۡرَ مُتَجَانِفٖ لِّإِثۡمٖ فَإِنَّ ٱللَّهَ غَفُورٞ رَّحِيمٞ ٣﴾ [المائدة: 3].

*“ಇಂದು ನಾನು ನಿಮಗೆ ನಿಮ್ಮ ಧರ್ಮವನ್ನು ಪೂರ್ತಿ ಮಾಡಿಕೊಟ್ಟಿರುವೆನು. ನನ್ನ ಅನುಗ್ರಹವನ್ನು ನಾನು ನಿಮಗೆ ನೆರವೇರಿಸಿಕೊಟ್ಟಿರುವೆನು. ಇಸ್ಲಾಮನ್ನು ಧರ್ಮವಾಗಿ ನಾನು ನಿಮಗೆ ತೃಪ್ತಿಪಟ್ಟಿರುವೆನು. ಯಾರಾದರೂ ಹಸಿವಿನ*

*ನಿಮಿತ್ತ (ನಿಷಿದ್ಧವಾಗಿರುವುದನ್ನು ತಿನ್ನಲು) ನಿರ್ಬಂಧಿತನಾದರೆ ಮತ್ತು ಅವನು ಅವಿಧೇಯತೆಯೆಡೆಗೆ ವಾಲುವವನಲ್ಲದಿದ್ದರೆ ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿರುವನು."* [ಕುರ್ಆನ್ 5:3]

ಯಾಕೆಂದರೆ ಧರ್ಮದ ಭಾಗವೆಂದು ಭಾವಿಸಿ ಅವನು ಮಾಡುತ್ತಿರುವ ಬಿದ್ಅತ್ ವಾಸ್ತವವಾಗಿ ಈ ಆಯತ್ ಅವತೀರ್ಣಗೊಳ್ಳುವ ಸಂದರ್ಭದಲ್ಲಿ ಧರ್ಮದಲ್ಲಿ ಸೇರಿದ್ದಾಗಿರಲಿಲ್ಲ. ಆಗ ಅವನ ವಾದ ಪ್ರಕಾರ ಧರ್ಮ ಪೂರ್ಣವಾಗಿದೆ ಎಂಬ ಈ ಆಯತ್ ಸುಳ್ಳಾಗುತ್ತದೆ.

2. ಅವನು ಮಾಡುವ ಬಿದ್‌ಅತ್ ಅಲ್ಲಾಹು ಮತ್ತು ಅವನ ರಸೂಲ್ (ﷺ)ರಿಗಿಂತಲೂ ತಾನು ಮುಂದಿದ್ದೇನೆ ಎಂಬುದನ್ನು ಸೂಚಿಸುತ್ತದೆ. ಕಾರಣ, ಧರ್ಮದಲ್ಲಿಲ್ಲದ ಒಂದು ಕಾರ್ಯವನ್ನು ಅವನು ಧರ್ಮಕ್ಕೆ ಸೇರಿಸಿದ್ದಾನೆ. ಅದು ಕೂಡ ಅಲ್ಲಾಹು ಈ ಧರ್ಮಕ್ಕೆ ಸಂಬಂಧಿಸಿದ ಎಲ್ಲ ನಿಯಮ, ಕಾನೂನು ಮತ್ತು ಕರ್ಮಗಳನ್ನು ಪೂರ್ತಿಗೊಳಿಸಿದ ನಂತರ. ಆದುದರಿಂದ ಬಿದ್‌ಅತ್ ಮಾಡುವವರು ತಾವು ಅಲ್ಲಾಹು ಮತ್ತು ಅವನ ರಸೂಲ್(ﷺ)ರಿಗಿಂತಲೂ ಮುಂದಿದ್ದೇವೆ, ಅವರಿಗೆ ಗೊತ್ತಿಲ್ಲದ್ದು ನಮಗೆ ಗೊತ್ತಿದೆ ಎಂದು ವಾದಿಸುತ್ತಿದ್ದಾರೆ. ಅವರು ಅಲ್ಲಾಹು ವಿಧಿಸಿದ ಹದ್ದುಗಳನ್ನು

ಮೀರುತ್ತಿದ್ದಾರೆ. ಅಲ್ಲಾಹನ ಹದ್ದುಗಳನ್ನು ಮೀರಿದವರು ಅಕ್ರಮಿಗಳಾಗಿದ್ದಾರೆ.

3. ಬಿದ್‌ಅತ್ ಮಾಡುವ ಮೂಲಕ ಅವನು ತನ್ನನ್ನು ತಾನೇ ಅಲ್ಲಾಹನಿಗೆ ಸಹಭಾಗಿಯನ್ನಾಗಿ ಮಾಡಿಕೊಳ್ಳುತ್ತಿದ್ದಾನೆ. ಅಲ್ಲಾಹು ಹೇಳುತ್ತಾನೆ:

﴿أَمۡ لَهُمۡ شُرَكَٰٓؤُاْ شَرَعُواْ لَهُم مِّنَ ٱلدِّينِ مَا لَمۡ يَأۡذَنۢ بِهِ ٱللَّهُۚ وَلَوۡلَا كَلِمَةُ ٱلۡفَصۡلِ لَقُضِيَ بَيۡنَهُمۡۗ وَإِنَّ ٱلظَّٰلِمِينَ لَهُمۡ عَذَابٌ أَلِيمٞ ٢١﴾

[الشورى: 21].

*“ಅಲ್ಲಾಹು ಅನುಮತಿಸದ ವಿಷಯವನ್ನು ಅವರಿಗೆ ಧರ್ಮವನ್ನಾಗಿ ಮಾಡಿಕೊಟ್ಟ ಯಾರಾದರೂ ಸಹಭಾಗಿಗಳು*

*ಅವರಿಗಿರುವರೇ? ನಿರ್ಣಾಯಕ ವಿಧಿಯ ಬಗ್ಗೆಯಿರುವ ಆಜ್ಞೆಯು ಇಲ್ಲದಿರುತ್ತಿದ್ದರೆ ಅವರ ಮಧ್ಯೆ ತಕ್ಷಣ ತೀರ್ಪು ನೀಡಲಾಗುತ್ತಿತ್ತು. ಖಂಡಿತವಾಗಿಯೂ ಅಕ್ರಮಿಗಳಿಗೆ ಯಾತನಾಮಯವಾದ ಶಿಕ್ಷೆಯಿದೆ."* [ಕುರ್‌ಆನ್ 42:21]

4. ಅವನು ಮಾಡುವ ಬಿದ್‌ಅತ್ ಆಗಿರುವ ಕಾರ್ಯವು ಇವೆರಡು ವಿಷಯಗಳಲ್ಲಿ ಒಂದನ್ನು ಅನಿವಾರ್ಯಗೊಳಿಸುತ್ತದೆ: ಒಂದೋ ಪ್ರವಾದಿ(ﷺ)ರವರು ಅಜ್ಞಾನಿಯಾಗಿದ್ದುದರಿಂದ ಅವರಿಗೆ ಈ ಕಾರ್ಯದ ಬಗ್ಗೆ ಗೊತ್ತಿಲ್ಲದ ಕಾರಣ ಅವರು ಇದನ್ನು ನಿರ್ವಹಿಸಿಲ್ಲ. ಅಥವಾ ಅವರಿಗೆ ಈ ಕಾರ್ಯದ ಬಗ್ಗೆ ಗೊತ್ತಿದ್ದೂ ಸಹ ಅವರು ಇದನ್ನು ನಮಗೆ

ಕಲಿಸಿಕೊಡದೆ ಮುಚ್ಚಿಟ್ಟಿದ್ದಾರೆ. ಇವೆರಡು ವಾದಗಳೂ ಪ್ರವಾದಿ(ﷺ) ರನ್ನು ಅವಹೇಳನ ಮಾಡುವುದಾಗಿದೆ.

5. ಬಿದ್‌ಅತ್ ಮಾಡುವುದು ಜನರು ಅಲ್ಲಾಹನ ಧರ್ಮವನ್ನು ಅವರಿಗೆ ಬೇಕಾದ ರೀತಿಯಲ್ಲಿ ವ್ಯಾಖ್ಯಾನ ಮಾಡುವ ಮತ್ತು ತಮಗೆ ಸರಿ ಕಂಡದ್ದನ್ನು ಸೇರಿಸುವ ಮತ್ತು ಸರಿ ಕಾಣದ್ದನ್ನು ಅಳಿಸುವ ಧೈರ್ಯವನ್ನು ನೀಡುತ್ತದೆ. ಇದು ಇಸ್ಲಾಂ ಧರ್ಮದ ಮೇಲೆ ಮಾಡುವ ಅತಿದೊಡ್ಡ ಆಕ್ರಮಣವಾಗಿದೆ.

6. ಬಿದ್‌ಅತ್‌ಗಳು ಸಮುದಾಯದ ಐಕ್ಯತೆಯನ್ನು ಛಿದ್ರಗೊಳಿಸುತ್ತದೆ. ಪ್ರತಿಯೊಂದು ಪಂಗಡವೂ ತಾವು ಸರಿ

ಕಂಡದನ್ನು ಮಾತ್ರ ಅನುಸರಿಸುತ್ತಾರೆ. ತಮಗೆ ತಮ್ಮದೇ ಆದ ಮಾರ್ಗವನ್ನು ರಚಿಸುತ್ತಾರೆ. ಹೀಗೆ ಅವರು ಅಲ್ಲಾಹು ಈ ಆಯತ್‌ನಲ್ಲಿ ಹೇಳಿದ ಸ್ಥಿತಿಗೆ ತಲುಪುತ್ತಾರೆ:

﴿وَلَا تَكُونُواْ كَٱلَّذِينَ تَفَرَّقُواْ وَٱخۡتَلَفُواْ مِنۢ بَعۡدِ مَا جَآءَهُمُ ٱلۡبَيِّنَٰتُۚ وَأُوْلَٰٓئِكَ لَهُمۡ عَذَابٌ عَظِيمٞ ١٠٥﴾ [آل عمران: 105].

*"ತಮ್ಮ ಬಳಿಗೆ ಸ್ಪಷ್ಟವಾದ ಪುರಾವೆಗಳು ಬಂದ ಬಳಿಕವೂ ವಿವಿಧ ಪಂಗಡಗಳಾಗಿ ಬೇರ್ಪಟ್ಟು ಭಿನ್ನರಾಗಿ ಹೋದವರಂತೆ ನೀವಾಗಬಾರದು. ಘೋರ ಶಿಕ್ಷೆಯಿರು*

ವುದು ಅವರಿಗೇ ಆಗಿದೆ.” [ಕುರ್‌ಆನ್ 3:105]

﴿إِنَّ ٱلَّذِينَ فَرَّقُواْ دِينَهُمۡ وَكَانُواْ شِيَعٗا لَّسۡتَ مِنۡهُمۡ فِي شَيۡءٍۚ إِنَّمَآ أَمۡرُهُمۡ إِلَى ٱللَّهِ ثُمَّ يُنَبِّئُهُم بِمَا كَانُواْ يَفۡعَلُونَ ١٥٩﴾ [الأنعام: 159] .

“ತಮ್ಮ ಧರ್ಮವನ್ನು ವಿಭಜನೆ ಮಾಡಿದವರು ಮತ್ತು ವಿವಿಧ ಬಣಗಳಾಗಿ ಮಾರ್ಪಟ್ಟವರೊಂದಿಗೆ ತಮಗೆ ಯಾವುದೇ ಸಂಬಂಧವೂ ಇಲ್ಲ. ಅವರ ವಿಷಯವು ಅಲ್ಲಾಹನೆಡೆಗೇ ಆಗಿದೆ. ಅವರು ಮಾಡುತ್ತಿದ್ದುದರ ಬಗ್ಗೆ ತರುವಾಯ ಅವನು ಅವರಿಗೆ ತಿಳಿಸಿ ಕೊಡುವನು.” [ಕುರ್‌ಆನ್ 6:159]

7. ಬಿದ್‌ಅತ್‌ಗಳು ಜನರನ್ನು ಬಿದ್ ಅತ್‌ಗಳಲ್ಲೇ ಮಗ್ನರಾಗುವಂತೆ ಮಾಡುತ್ತದೆ. ಅವರು ಸುನ್ನತ್‌ಗಳನ್ನು ತಿರಸ್ಕರಿಸುತ್ತಾರೆ. ಅವರು ಒಂದು ಬಿದ್‌ಅತನ್ನು ಮಾಡುವಾಗ ಅದಕ್ಕೆ ಸಮವಾದ ಒಂದು ಸುನ್ನತ್ತನ್ನು ನುಚ್ಚುನೂರು ಮಾಡುತ್ತಾರೆ.

ಒಬ್ಬ ಮುಸಲ್ಮಾನನಿಗೆ ಸಂಬಂಧಿಸಿದಂತೆ ಅಲ್ಲಾಹನ ಗ್ರಂಥದಲ್ಲಿ ಮತ್ತು ಪ್ರವಾದಿ(ﷺ)ರವರ ಸಹೀಹಾದ ಸುನ್ನತ್ತಿನಲ್ಲಿ ಬಂದಿರುವುದು ಧಾರಾಳ ಸಾಕು. ಅಲ್ಲಾಹು ಹೇಳುತ್ತಾನೆ:

﴿يَـٰٓأَيُّهَا ٱلنَّاسُ قَدۡ جَآءَتۡكُم مَّوۡعِظَةٞ مِّن رَّبِّكُمۡ وَشِفَآءٞ لِّمَا فِي ٱلصُّدُورِ وَهُدٗى وَرَحۡمَةٞ لِّلۡمُؤۡمِنِينَ ٥٧ قُلۡ بِفَضۡلِ ٱللَّهِ وَبِرَحۡمَتِهِۦ فَبِذَٰلِكَ فَلۡيَفۡرَحُواْ هُوَ خَيۡرٞ مِّمَّا يَجۡمَعُونَ ٥٨﴾

[يونس: 57-58].

“ಓ ಮನುಷ್ಯರೇ! ನಿಮ್ಮ ರಬ್ಬಿನ ವತಿಯ ಉಪದೇಶ ಮತ್ತು ಹೃದಯಗಳಲ್ಲಿರುವ ರೋಗಕ್ಕೆ ಉಪಶಮನವು ನಿಮ್ಮೆಡೆಗೆ ಬಂದಿದೆ. ಸತ್ಯವಿಶ್ವಾಸಿಗಳಿಗೆ ಮಾರ್ಗದರ್ಶಿ ಮತ್ತು ಕಾರುಣ್ಯವು ಬಂದಿದೆ. ಹೇಳಿರಿ: ‘ಇದು ಅಲ್ಲಾಹುವಿನ ಅನುಗ್ರಹ ಮತ್ತು ಕಾರುಣ್ಯದಿಂದ. ಅದರ ಮೂಲಕ ಅವರು ಸಂಭ್ರಮಪಡಲಿ. ಅವರು

*ಒಟ್ಟುಗೂಡಿಸಿಡುವುದಕ್ಕಿಂತಲೂ ಇದು ಅತ್ಯುತ್ತಮವಾಗಿದೆ'."* [ಕುರ್‌ಆನ್ 10:57–58]

﴿فَإِمَّا يَأۡتِيَنَّكُم مِّنِّي هُدٗى فَمَنِ ٱتَّبَعَ هُدَايَ فَلَا يَضِلُّ وَلَا يَشۡقَىٰ ١٢٣﴾ [طه: 123] .

*"ಆದರೆ ನನ್ನ ಕಡೆಯಿಂದ ಒಂದು ಮಾರ್ಗದರ್ಶನವು ಬರುವಾಗ, ಆ ನನ್ನ ಮಾರ್ಗದರ್ಶನವನ್ನು ಅನುಸರಿಸುವವನು ಪಥಭ್ರಷ್ಟನಾಗಲಾರನು ಮತ್ತು ಕಷ್ಟಪಡಲಾರನು'."* [ಕುರ್‌ಆನ್ 20:123]

[ಮಜ್ಮೂಉ ಫತಾವಾ ವರಸಾಇಲ್ ಇಬ್ನ್ ಉಸೈಮೀನ್ 20/25–33]

ಶಅ್‌ಬಾನ್ ತಿಂಗಳಲ್ಲಿ ಉಪವಾಸ ಆಚರಿಸುವುದಕ್ಕಿರುವ ಶ್ರೇಷ್ಠತೆಯನ್ನು ವಿವರಿಸವುದರೊಂದಿಗೆ ಶಅ್‌ಬಾನ್ ತಿಂಗಳಲ್ಲಿ ಕೆಲವು ಅಜ್ಞಾನಿಗಳು ನಿರ್ವಹಿಸುವ ಬಿದ್‌ಅತ್‌ಗಳ ಬಗ್ಗೆ ಈ ಕೃತಿಯಲ್ಲಿ ಎಚ್ಚರಿಸಲಾಗಿದೆ.

IslamHouse.com